ಗಣೇಶ್

ಗುಂಡ: ಲೇ ಸುಬ್ಬ, ನಿನ್ನೆ ರಾತ್ರಿ ಒಂದು ಭರ್ಜರಿ ಪಾರ್ಟಿಗೆ ಹೋಗಿದ್ದೆ ಅಲ್ಲಿ ತರಾವರಿ ತಿಂಡಿಗಳನ್ನ ಜೋಡಿಸಿ ಇಟ್ಟಿದ್ರು. ಅದ್ರಲ್ಲಿ ಪಾಲಕ್ ಬಣ್ಣದ ಚಕ್ಕುಲಿ ತುಂಬಾ ಇಷ್ಟ ಆಗಿ ಎರಡು ತಿಂದೇ ಬಿಟ್ಟೆ.

ಸುಬ್ಬ: ಲೇಯ್, ಪೆದ್ ಮುಂಡೇದೆ, ಅದು ಚಕ್ಕಲಿ ಅಲ್ಲಾ ಕಣೋ, ಮಷ್ಕಿಟೋ ಕಾಯಲ್!

ಗುಂಡ: ನೋಡಯ್ಯ ಈ ಜಗತ್ತಲ್ಲಿ ಹುಡುಗರ ಬಗ್ಗೆ ದೊಡ್ಡ ತಪ್ಪು ತಿಳಿದುಕೊಂಡಿದ್ದಾರೆ.

ಸುಬ್ಬ: ಏನಪ್ಪಾ ಅಂತಹ ತಪ್ಪು ತಿಳಿವಳಿಕೆ?

ಗುಂಡ: ಅಯ್ಯೋ ಪೆದ್ದೇ, ಮದುವೆ ಆದ್ಮೇಲೆ ಹುಡುಗ ಸರಿಹೋಗ್ತಾನೆ ಅಂತ ತಿಳಿದು ತಿಳಿದೂ ತಪ್ಪೇ ಮಾಡ್ತಾರೆ ಅಲ್ಲವಾ?

***

ಅತಿಥಿ: ಬಾಗಿಲವರೆಗೂ ಬಂದು ಬೀಳ್ಕೊಡುತ್ತಿದ್ದೀರಿ... ತುಂಬಾ ಸಂತೋಷ... ನಮ್ಮೆಲ್ಲರನ್ನೂ ತುಂಬಾ ಚೆನ್ನಾಗಿ ಸತ್ಕಾರ ಮಾಡಿದಿರಿ..

ಸುಬ್ಬ: ಅಯ್ಯೋ ಬಿಡಿ, ಅದೆಲ್ಲ ನಮ್ಮ ಕರ್ತವ್ಯ! ಅಂದ ಹಾಗೆ ನಿನ್ನೆ ತಾನೇ ಹೊಸ ಚಪ್ಪಲಿ ತಗೊಂಡಿದ್ದೆ...

***

ಸುಬ್ಬ: ಯಾಕೋ ಗುಂಡಾ ತುಂಬ ಡಲ್ ಆಗಿದ್ದೀಯಾ?

ಗುಂಡ: ಅಯ್ಯೋ, ನನ್ನ ಕರ್ಮ, ಮದುವೆ ಮನೆಯಲ್ಲಿ ಒಂದು ಜೋಡಿ ಸೇರುವುದನ್ನು ನೋಡೋಕೆ ಹೋಗಿ ನನ್ನ ಹೊಸ ಜೋಡು ಕಳ್ಕೊಂಡೇ ಕಣಪ್ಪ!

***

ಗುಂಡ: ಏನಮ್ಮಾ ಇದು. ಇವತ್ತೂ ಉಪ್ಪಿಟ್ಟೇ ಮಾಡಿದ್ದೀಯಾ?

ಅಮ್ಮ: ಬಾಯಿ ಮುಚ್ಕೊಂಡ್ ತಿನ್ನು. ಈ ತರಹದ ಧಿಮಾಕೆಲ್ಲಾ ನಿನ್ ಹೆಂಡ್ತಿ ಮುಂದೆ ಇಟ್ಕೋ.

ಗುಂಡ: (ಮದುವೆ ಆದ ನಾಕು ತಿಂಗಳ ಬಳಿಕ) ಲೇ, ಸುಬ್ಬಿ, ಇದೇನೇ ಇದು? ಇವತ್ತೂ ಉಪ್ಪಿಟ್ಟು ಮಾಡಿದ್ದೀ?

ಸುಬ್ಬಿ: ಮುಚ್ಕೊಂಡ್ ತಿಂದು ಎದ್ದು ಹೋಗು. ಇಂಥ ಧಿಮಾಕನ್ನು ನಂತಾವ ಇಟ್ಕಾ ಬ್ಯಾಡಾ ಇದೆಲ್ಲಾ ನಿನ್ನ ಅಮ್ಮನ ಹತ್ರಾ ಇಟ್ಕೋ!

***

ಗುಂಡ: ಲೋ ಸುಬ್ಬ, ನಮ್ ಮನೆ ಪಾತ್ರೆಗಳು ಕಳೆದು ಹೋಗದ ಹಾಗೇ ಒಂದು ಉಪಾಯ ಮಾಡಿದೀನಿ ಗೊತ್ತಾ?

ಸುಬ್ಬ: ಏನಪ್ಪ ಅಂಥ ಉಪಾಯ ಮಾಡಿರೋದು?

ಗುಂಡ: ಎಲ್ಲ ಪಾತ್ರೆಗಳ ಮೇಲೂ ನನ್ನ ಹೆಸರೂ ಕೆತ್ತಿಸಿದ್ದೀನಿ ಗೊತ್ತಾ?

ಸುಬ್ಬ: ಅಯ್ಯೋ ಇಷ್ಟೇನಾ ಬಿಡು ಏನು ಮಹಾ, ನಮ್ಮ ಮನೇಲಿರೋ ಪಾತ್ರೆಗಳ ಮೇಲೂ ಹೆಸರಾಂತ ಕಲ್ಯಾಣ ಮಂಟಪಗಳ ಹೆಸರಿವೆ ಗೊತ್ತಾ?

***

ಸುಬ್ಬ: ಗುಂಡ, ನಿನಗೆ ಮದುವೆಯಾಗಿ ಎಷ್ಟು ವರ್ಷ ಆಯ್ತು?

ಗುಂಡ: ಆಗ್ಲೇ ಮೂವತ್ತು ವರ್ಷ ಆಯ್ತು ಕಣಲೇ.

ಸುಬ್ಬ: ಹಾಗಾದ್ರೆ ಮಕ್ಕಳು ಎಷ್ಟು?

ಗುಂಡ: ಅಷ್ಟೇನೂ ಇಲ್ಲ ಬಿಡಯ್ಯಾ ಬರೀ ಏಳು ಮಕ್ಕಳು.

—ಆರ್. ವೀರೇಶ್ ಕುಮಾರ್, ಬೆಂಗಳೂರು

ತಿಮ್ಮ: ಹೋಟೆಲ್‌ನಲ್ಲಿ ಏನು ತಿಂಡಿ ಬೇಕೊ ಗುಂಡ

ಗುಂಡ: ಈರುಳ್ಳಿ ಹಾಕದೇ ಇರುವ ತಿಂಡಿ

ತಿಮ್ಮ: ಯಾಕೋ ಈರುಳ್ಳಿ ಸೇರಲ್ವಾ

ಗುಂಡ: ಸೇರತ್ತೆ ತುಂಬಾ ಇಷ್ಟ

ತಿಮ್ಮ: ಮತ್ತೆ ಈಗ ಯಾಕೆ ಬೇಡ

ಗುಂಡ: ನಮ್ಮಮ್ಮ ಹೇಳಿದ್ರೂ ಯಾರ ಕಣ್ಣಲ್ಲೂ ನೀರು ಹಾಕಿಸಬೇಡ ಅಂತ

***

ತಿಮ್ಮ : ಚೆನ್ನಾಗಿ ಇದ್ದಿಯೇನೊ ಎಷ್ಟು ದಿನ ಆಯ್ತು ನಿನ್ನನ್ನ ನೋಡಿ ಇವತ್ತು ಡ್ಯುಟಿ ಇಲ್ವಾ?

ಗುಂಡ: ಇದೆ. ನೈಟ್ ಡ್ಯುಟಿ

ತಿಮ್ಮ: ಓಹೋ ನೈಶಿಫ್ಟ್ ಡ್ಯುಟಿನಾ

ಗುಂಡ: ಹಾಗೇನೂ ಇಲ್ಲ. ಬೆಂಗಳೂರಲ್ಲಿ ಎರಡು ವರ್ಷ ಡೇ ಡ್ಯುಟಿ ಮಾಡಿದೆ. ಬಿಹಾರಕ್ಕೆ ವರ್ಗ ಆಯ್ತು. ಅಲ್ಲೂ ಎರಡು ವರ್ಷಗಳು ಬರೀ ಡೇ ಡ್ಯುಟಿ. ಈಗಷ್ಟೇ ನೈಟ್ ಡ್ಯುಟಿ ಶುರು ಮಾಡಿದ್ದೀನಿ ಯಾವಾಗ ಡೇ ಡ್ಯುಟಿ ಆಗುತ್ತೋ ಗೋತ್ತಿಲ್ಲ.

ತಿಮ್ಮ: ಹೌದಾ? ಏನು ಕೆಲಸ.

ಗುಂಡ: ಮನೆಗಳವು.

***

ತಿಮ್ಮ : ಏನೋ ನಮ್ಮಮ್ಮ ಬಹಳ ಸ್ಟ್ರಿಕ್ಟ್. ಹೊರಗೆ ಎಲ್ಲೂ ತಿನ್ನಬೇಡ ಅದಿದ್ದಾರೆ ಅಂತ ನೀನೇ ಹೇಳ್ದೆ ಈಗ ಹೋಟೆಲ್ ಒಳಗೆ ಕೂತು ಚೆನ್ನಾಗಿ ತಿನ್ನುತ್ತಾ ಇದ್ದೀಯ ಎನು ಸಮಾಚಾರ

ಗುಂಡ: ಅವರು ಹೇಳಿದ್ದು ಹೊರಗೆ, ಒಳಗೆ ಅಲ್ವಲ್ಲಾ...

—ಬಿ.ಆರ್. ಉಷಾ ಬೆಂಗಳೂರು